# ಕರ್ನಾಟಕ ವಿಧಾನ ಪರಿಷತ್ತು

ವಿಧಾನಸಭಾ ಸದಸ್ಯರ ಹೆಸರು : ಶ್ರೀ. ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1007 (1104)

ಉತ್ತರಿಸಬೇಕಾದ ದಿನಾಂಕ : 17.03.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ CRZ 2019 ನಿಯಾಮವಳಿಯಂತೆ ಕುದ್ರು ದೀಪ ಪ್ರದೇಶದಲ್ಲಿ ಕರಾವಳಿ ನಿಯಂತ್ರಣ ವಲಯ ಎಷ್ಟು ಮೀಟರ್‌ವರೆಗೆ ಇರುತ್ತದೆ: (ವಿವರ ನೀಡುವುದು) | ಕರಾವಳಿ ನಿಯಂತ್ರಣ ವಲಯ (CRZ) ಅಧಿಸೂಚನೆ 2019 ರನ್ವಯ ಕುದ್ರು ದ್ವೀಪ ಪ್ರದೇಶಗಳಲ್ಲಿ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯನ್ನು 20 ಮೀಟರ್‌ಗೆ ನಿಗದಿ ಪಡಿಸಲಾಗಿದೆ.<br>ಆದರೆ, ಸಮಗ್ರ ದ್ವೀಪ ನಿರ್ವಹಣಾ ಯೋಜನೆ (Integrated Island Management Plan) ಅಂತಿಮಗೊಳ್ಳದಿರುವುದರಿಂದ, CRZ ಅಧಿಸೂಚನೆ 2019 ರ 10.2 (iii) ರ ಅನುಸಾರ ಈ ವ್ಯಾಪ್ತಿಯು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರ ಪ್ಯಾರಾ 1(i) ರಂತೆ ಸಮುದ್ರ ಭರತ ರೇಖೆಯಿಂದ 500 ಮೀಟರ್‌ವರೆಗೆ ಹಾಗೂ ಪ್ಯಾರಾ 1(ii) ರಂತೆ ಕಡಲಿಗೆ ಕೂಡಿದ ಉಬ್ಬರ ವಿಳಿತ ಪ್ರಭಾವಕ್ಕೆ ಒಳಪಟ್ಟ ಜಲಮೂಲಗಳ ಉದ್ದಕ್ಕೂ HTL ಯಿಂದ ಭೂಮುಖವಾಗಿ 100 ಮೀಟರ್‌ಗಳವರೆಗೆ ಅಥವಾ ತೊರೆ (ಕ್ರೀಕ್ಸ್) ಅಗಲಕ್ಕೆ, ಇವುಗಳಲ್ಲಿ ಯಾವುದರ ವಿಸ್ತಾರ ಕಡಿಮೆ ಇರುತ್ತದೆಯೋ ಆ ಭೂ-ಪ್ರದೇಶದ ವ್ಯಾಪ್ತಿಯವರೆಗೆ ಅನ್ವಯಿಸುತ್ತದೆ. |
| ಆ) | ರಾಜ್ಯದ ಕರಾವಳಿ ತೀರದಲ್ಲಿ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳಿಗೆ ಮನೆ ನಿರ್ಮಾಣ ಮಾಡಲು ಅನುಸರಿಸಬೇಕಾದ ಕ್ರಮಗಳು ಯಾವುವು: | ಕರಾವಳಿ ತೀರದಲ್ಲಿ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳು ಮನೆ ನಿರ್ಮಾಣ ಮಾಡಲು ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ಪಡೆಯಲು ಪ್ರಕ್ರಿಯೆಯನ್ನು 2024ರ ನಂತರ ಆನ್‌ಲೈನ್ PARIVESH 2.0 Portal ಮುಖಾಂತರ ಅರ್ಜಿ ಸಲ್ಲಿಸಿ, ಸದರಿ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯಬಹುದಾಗಿದೆ. |
| ಇ) | ರಾಜ್ಯದ ಕರಾವಳಿ ತೀರದಲ್ಲಿ ಜನ ಸಾಮಾನ್ಯರು CRZ ನಿಯಮದಿಂದ ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿದ್ದು, ಅದರಲ್ಲೂ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳಿಗೆ ತಮ್ಮ ಊರಿನಲ್ಲಿಯೇ ಮನೆ ನಿರ್ಮಾಣ ಮಾಡುವುದು ಕಷ್ಟಸಾಧ್ಯವಾಗಿರುವ ಬಗ್ಗೆ ಸರಕಾರ ಏನು ಕ್ರಮವಹಿಸಿದೆ: | ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ವಾಸಿಸುವ ಜನರು ಅಭಿವೃದ್ಧಿ ಚಟುವಟಿಕೆಯನ್ನು ಕೈಗೊಳ್ಳಲು ಪೂರಕವಾಗಿ ಕೇಂದ್ರ ಸರ್ಕಾರವು ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ಪಡೆಯುವ ಪ್ರಕ್ರಿಯೆಯನ್ನು ಆನ್ ಲೈನ್ Parivesh 2.0 Portal ಮುಖಾಂತರ ನಿರ್ವಹಿಸುವುದನ್ನು ಜಾರಿಗೊಳಿಸಿದ್ದು, ಅರ್ಜಿದಾರರು ವಾಸ್ತವ್ಯದ ಮನೆ ನಿರ್ಮಾಣ ಹಾಗೂ ಇತರೆ ಚಟುವಟಿಕೆ ಕೈಗೊಳ್ಳಲು ಸದರಿ ಪೋರ್ಟಲ್‌ನಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಬೇಕಾಗಿದೆ. ಸದರಿ ಪೋರ್ಟಲ್‌ನಲ್ಲಿ ಸ್ವೀಕೃತವಾದ ಅರ್ಜಿಯನ್ನು ಕರ್ನಾಟಕ |

| | | |
|---|---|---|
| | | ರಾಜ್ಯ ಕಡಲತೀರ ವಲಯ ನಿರ್ವಹಣಾ ಪ್ರಾಧಿಕಾರ (KSCZMA)ದ ಸಭೆಯಲ್ಲಿ ಪರಿಶೀಲನೆ ನಡೆಸಿ, ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರವನ್ನು ನೀಡಲಾಗುತ್ತದೆ. ನಂತರ CRZ-2019 ಅಧಿಸೂಚನೆ ಅನುಸಾರ ಅಭಿವೃದ್ಧಿ ಚಟುವಟಿಕೆ / ಮನೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿರುತ್ತದೆ. |
| ಈ) | ಪರಿಸರ ಇಲಾಖೆಯಿಂದ ಈಗಾಗಲೇ (IIMP) Integrated Island Management Plan ರೂಪಿಸಲಾಗಿದೆಯೇ ಹಾಗೂ ಇದರ ಬಗ್ಗೆ ಮಾಹಿತಿ ನೀಡುವುದು: | ಕೇಂದ್ರ ಸರ್ಕಾರವು 10 ಹೆಕ್ಟೇರ್‌ಗಿಂತ ಕಡಿಮೆ ವಿಸ್ತೀರ್ಣ ಹೊಂದಿರುವ ಸಣ್ಣ ದ್ವೀಪಗಳ ಸಮಗ್ರ ದ್ವೀಪ ನಿರ್ವಹಣಾ ಯೋಜನೆಗಳ (Integrated Island Management Plan - IIMPS) ಕರಡು ಸಾಮಾನ್ಯ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಯು ಅಂತಿಮಗೊಂಡಿರುವುದಿಲ್ಲ. |
| ಉ) | ಮೂಲ ನಿವಾಸಿಗಳಿಗೆ ಗರಿಷ್ಠ 100 ಚದರ ಮೀಟರ್ ವಿಸ್ತೀರ್ಣದ ಮನೆ ನಿರ್ಮಾಣ ಮಾಡಲು ಸ್ಥಳೀಯಾಡಳಿತ ಸಂಸ್ಥೆಗಳಿಗೆ ಅನುಮತಿ ನೀಡುವ ಜೊತೆಗೆ ಆದಷ್ಟು ಬೇಗ ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯಕ್ಕೆ ಈ ಕುರಿತ ನಿಯಮಗಳ ಸರಳೀಕರಣ ಮಾಡುವ ಕುರಿತು ಯಾವ ರೀತಿ ಕ್ರಮವಹಿಸಿದೆ? | ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019ರ ಪ್ಯಾರಾ 7(vi) ಅನುಸಾರ ಅಧಿಸೂಚನೆಯ ನಿಯಮಗಳಿಗೆ ಒಳಪಡುವ ಪ್ರದೇಶಗಳಲ್ಲಿ 300 ಚ.ಮೀ.ವರೆಗಿನ ಸ್ವಂತ ವಾಸ್ತವ್ಯದ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರಗಳಿಂದ NOC ನೀಡುವ ಕುರಿತು ವಿವರವಾದ ಕರಡು ವರದಿಯನ್ನು ಸಲ್ಲಿಸುವಂತೆ ಪ್ರಾದೇಶಿಕ ನಿರ್ದೇಶಕರು (ಪರಿಸರ), ಮಂಗಳೂರು, ಉಡುಪಿ ಮತ್ತು ಕಾರವಾರ ಇವರುಗಳಿಂದ ವರದಿ ಕೋರಲಾಗಿದೆ.<br><br>ಅದರನ್ವಯ, ವರದಿ ಸ್ವೀಕೃತವಾದ ನಂತರ ರಾಜ್ಯ ಕಡಲತೀರ ನಿರ್ವಹಣಾ ವಲಯ ಪ್ರಾಧಿಕಾರದ ವತಿಯಿಂದ ಪರಿಶೀಲಿಸಲಾಗುತ್ತದೆ. |

**ಸಂಖ್ಯೆ**: ಅಪಜೀ 64 ಇಎನ್‌ವಿ 2025

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.